ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಕಾವೇರಿ ವನ್ಯಜೀವಿ ವಿಭಾಗ,
ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ.

ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

☎ : ಕಚೇರಿ : 08224-253027
ಫ್ಯಾಕ್ಸ್ : 08224-254027
E-mail : dcfcauverywl@gmail.com

ಸಂಖ್ಯೆ : ಎ4/ಲ್ಯಾಂಡ್/ಎಫ್‌ಸಿ/ವಿವ–8/2017–18 ದಿನಾಂಕ: 26–12–2018

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಪ್ರಾದೇಶಿಕ),
ಚಾಮರಾಜನಗರ.

ಮಾನ್ಯರೆ,

ವಿಷಯ :– Diversion of 2.124 (Revised from 1.494 ha.) of forest land in Sy. No.1 of Cheelandavadi Village, Kanakapura Taluk in Ramanagara Division, & District for construction of 66 KV Sc line on DC towers from existing 66/11 KV Doddalahalli Sub-station to Proposed 66/11 KV Hegganuru Substation (12.238 Kms distance) in favour of the Executive Engineer (Ele.) Major works division, Karnataka power Transmission Corporation Limited (KPTCL), Old BM Road, Ramanagara **Proposal No: FP/KA/TRANS/27085/2017**

ಉಲ್ಲೇಖ :–
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: A5(4)(6).GFL.CR-7/2017-18 Dated 12.02.2018
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಕನಕಪುರ ರವರ ಪತ್ರ ಸಂಖ್ಯೆ: ಸಅಸಂ/ವಉವಿ/ವಿಸ/ಸಿಆರ್–/2017–18 ದಿನಾಂಕ 07.04.2018 ಹಾಗೂ 07.05.2018
3. ಈ ಕಛೇರಿ ಇದೇ ಪತ್ರ ಸಮಸಂಖ್ಯೆ ದಿನಾಂಕ 16.05.2018.
4. ಅಧೀಕ್ಷಕ, ಇಂಜಿನಿಯರ್ (ವಿ), ಪ್ರಸರಣ(ಕಾಮಗಾರಿ), ವೃತ್ತ ಕವಿಪ್ರನಿನಿ, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: ಅಇಂ(ವಿ)/ ಪ್ರ(ಕಾ)ವೃ/ಕಾನಿಇ(ವಿ)/ಸಿಂ(ಕಾ)/18–19/2170–71 ದಿನಾಂಕ 01.09.2018
5. ಈ ಕಛೇರಿ ಇದೇ ಪತ್ರ ಸಮಸಂಖ್ಯೆ ದಿನಾಂಕ 06.09.2018
6. ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಪ್ರಾದೇಶಿಕ ವಿಭಾಗ ರವರ ಕಛೇರಿ ಪತ್ರ ಸಂಖ್ಯೆ: ಎ5/ಎಲ್‌ಎನ್‌ಡಿ/ಸಿಆರ್–27/2018–19/948 ದಿನಾಂಕ 02.12.2018 ಹಾಗೂ 13.12.2018

ಽಽಽ ೱೱ

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತಾವಿತ 66/11 ಕೆವಿ ಹೆಗ್ಗನೂರು ಉಪ ಕೇಂದ್ರಕ್ಕೆ ಹಾಲಿ ಇರುವ 66/11ಕೆವಿ ದೊಡ್ಡಾಲಹಳ್ಳಿ ಉಪ ಕೇಂದ್ರದಿಂದ 12.238 ಕಿ.ಮೀ. 66 ಕೆವಿ ಎಸ್.ಸಿ. ಮಾರ್ಗ ನಿರ್ಮಿಸಲು ಉದ್ದೇಶಿಸಿರುವ ಪ್ರಸ್ತಾವನೆಯನ್ನು ತಮಗೆ ಸಲ್ಲಿಸಲು ಉಲ್ಲೇಖ ಪತ್ರ (1)ರಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಆಫಿಸರ್ (ಎಫ್‌ಸಿಎ), ಅರಣ್ಯ ಭವನ ಬೆಂಗಳೂರು ರವರು ಸೂಚಿಸಿರುತ್ತಾರೆ. ಇದರಂತೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ಉಪ ವಿಭಾಗ, ಕನಕಪುರ ರವರು ಸ್ಥಳ ಪರಿಶೀಲಿಸಿ ಸಲ್ಲಿಸಿರುವ ವರದಿಯಂತೆ, ಸದರಿ ವಿದ್ಯುತ್

ಸರಬರಾಜು ಸ್ಟೇಷನ್ ಜಿಪಿಎಸ್ ರೀಡಿಂಗ್ N-12 19'26.5" E-77 24'50.2" ಆಗಿದ್ದು, ದೊಡ್ಡ ಆಲಹಳ್ಳಿ ಸ್ಟೇಷನ್‌ವರೆಗೆ 11.40 ಕಿ.ಮೀ ಅಂತರದಲ್ಲಿರುತ್ತದೆ. ಇದರಲ್ಲಿ ಹೆಗ್ಗನೂರು ಸ್ಟೇಷನ್‌ನಿಂದ ಕಾವೇರಿ ವನ್ಯಜೀವಿ ಧಾಮದ ಚೀಲಂದವಾಡಿ ಮೀಸಲು ಅರಣ್ಯ ಪ್ರದೇಶದ ಗಡಿ 1.5 ಕಿ.ಮೀ ಆಗಿರುತ್ತದೆ. ಅರಣ್ಯ ಪ್ರದೇಶದ ಪ್ರಾರಂಭದ ಜಿಪಿಎಸ್ ರೀಡಿಂಗ್ N-12 20'07.7" E-77 24'39.7" ನಿಂದ ಅರಣ್ಯ ಪ್ರದೇಶ ಪ್ರಾರಂಭವಾಗಿ 1.2 ಕಿ.ಮೀ. ಅರಣ್ಯ ಪ್ರದೇಶದಲ್ಲಿ ಸದರಿ ವಿದ್ಯುತ್‌ತಂತಿ ಹಾದು ಹೋಗುವುದು ಕಂಡು ಬಂದಿರುತ್ತದೆ. ಅರಣ್ಯ ಪ್ರದೇಶದ ಮುಕ್ತಾಯದ ಜಿಪಿಎಸ್ ರೀಡಿಂಗ್ N-12 20'41.9" E-77 24'40.2" ಇದ್ದು, ಅರಣ್ಯ ಪ್ರದೇಶ ಮುಕ್ತಾಯವಾಗುವ ಪ್ರದೇಶದಿಂದ ದೊಡ್ಡ ಆಲಹಳ್ಳಿ ಸ್ಟೇಷನ್‌ವರೆಗೆ 8.7 ಕಿ.ಮೀ. ಆಗಿದ್ದು, ಇದರ ಜಿಪಿಎಸ್ ರೀಡಿಂಗ್ N-12 24'29.0" E-77 22'41.6" ಆಗಿರುತ್ತದೆ. ಇದರಲ್ಲಿ 1.2 ಕಿ.ಮೀ. ಅರಣ್ಯ ಪ್ರದೇಶವಾಗಿದ್ದು, ಈ ಪ್ರದೇಶದಲ್ಲಿ ಕೆ.ಪಿ.ಟಿ.ಸಿ.ಎಲ್ ರವರ ಮೋಜಣಿ ನಕಾಶೆಯ ಪ್ರಕಾರ 18 ಮೀ. ಅಗಲದ 10 ವಿದ್ಯುತ್ ಕಂಬಗಳು ಹಾದು ಹೋಗುತ್ತವೆ. ಇದರ ಒಟ್ಟು ವಿಸ್ತೀರ್ಣ 21600 ಚ.ಕಿ.ಮೀ. ಆಗಿರುತ್ತದೆ ಹಾಗೂ ಉಳಿದ 10.2 ಕಿ.ಮೀ. ಪ್ರದೇಶವು ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಹಾಗೂ ಪರಿಸರ ಸೂಕ್ಷ್ಮ ವಲಯ ಅಂತಿಮ ಅಧಿಸೂಚನೆ ಸಂಖ್ಯೆ 2733(ಇ) ದಿನಾಂಕ 22.08.2018ರ ಪ್ರಕಾರ ಚೀಲಂದವಾಡಿ ಮೀಸಲು ಅರಣ್ಯದ ಸೂಕ್ಷ್ಮ ವಲಯಕ್ಕೆ ಒಳಪಟ್ಟಿರುತ್ತದೆ. ಈ ಪ್ರದೇಶದಲ್ಲಿ ಕೆ.ಪಿ.ಟಿ.ಸಿ.ಎಲ್ ರವರ ಮೋಜಣಿ ನಕಾಶೆಯ ಪ್ರಕಾರ 178 ಕಿ.ಮೀ. ಅಂತರದ 53 ವಿದ್ಯುತ್ ಕಂಬಗಳು ಹಾದುಹೋಗುತ್ತವೆ. ಇದರ ಒಟ್ಟು ವಿಸ್ತೀರ್ಣ 1,83,600 ಚ.ಮೀ ಆಗಿದ್ದು, ಸದರಿ ವಿದ್ಯತ್ ಸರಬರಾಜು ಸ್ಟೇಷನ್ ಚೀಲಂದವಾಡಿ ಮೀಸಲು ಅರಣ್ಯ ಪ್ರದೇಶದ ಸೂಕ್ಷ್ಮ ವಲಯಕ್ಕೆ ಒಳಪಟ್ಟಿರುತ್ತದೆ.

ಉಪಯೋಗಿ ಸಂಸ್ಥೆಯವರು ಭಾಗ–1ರಲ್ಲಿ ತುಂಬಿರುವ ಮಾಹಿತಿಗಳ ಪ್ರಕಾರ ಆನ್‌ಲೈನ್ ಪ್ರಸ್ತಾವನೆಯನ್ನು ಪರಿಶೀಲಿಸಿ ಉಪಯೋಗಿ ಸಂಸ್ಥೆಯವರು ಕೇಳಿರುವ 2.124 ಹೆಕ್ಟೇರ್ ಭೂಮಿಗೆ ಬದಲಾಗಿ ಅಷ್ಟೇ ಪ್ರಮಾಣದ ನಾನ್ ಫಾರೆಸ್ಟ್ ಭೂಮಿಯಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಭೂಮಿಯನ್ನು ಅರಣ್ಯ ಇಲಾಖೆಯ ಸುಪರ್ಧಿಗೆ ನೀಡಬೇಕಾಗಿರುವುದರಿಂದ ಈ ಪ್ರಮಾಣದ ಭೂಮಿಯು ಲಭ್ಯವಿಲ್ಲದಿದ್ದಲ್ಲಿ ಅರಣ್ಯ (ಸಂರಕ್ಷಣಾ ಕಾಯ್ದೆ) ಚಾಪ್ಟರ್–3 ಕಂಡಿಕೆ 3.2ರ (vi) ರಲ್ಲಿ ಸೂಚಿಸಿರುವ ಪ್ರಕಾರ ಅಗತ್ಯವಿರುವ ಭೂಮಿಯನ್ನು ನೀಡಲು ಹಾಗೂ Scanned copy of Geo reference Map and Copy of Survey of India Topo Sheet boundary of the land proposed Compensatory Afforestation. ಭೂಮಿಯ ಮಾಹಿತಿಯನ್ನು ಸಲ್ಲಿಸುವಂತೆ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಮೇಜರ್ ವರ್ಕ್ಸ್ ಡಿವಿಷನ್, ಕೆಪಿಟಿಸಿಎಲ್, ರಾಮನಗರ ರವರಿಗೆ ತಿಳಿಸಲಾಗಿತ್ತು, ಇದರಂತೆ ಉಲ್ಲೇಖ ಪತ್ರ (4) ರಲ್ಲಿ ಅಧೀಕ್ಷಕ ಇಂಜಿನಿಯರ್ ರವರು ಕೋರಿರುವ ಪ್ರಕಾರ ಉಪಯೋಗಿ ಸಂಸ್ಥೆಯವರು ಕೇಳಿರುವ 2.124 ಹೆಕ್ಟೇರ್ ಅರಣ್ಯ ಭೂಮಿಗೆ ಬದಲಾಗಿ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಎರಡು ಪಟ್ಟು ಡಿ ಗ್ರೇಡ್ ನಾನ್ ಫಾರೆಸ್ಟ್ ಭೂಮಿಯನ್ನು ಗುರುತಿಸಿ ದಾಖಲಾತಿಗಳೊಂದಿಗೆ ವರದಿ ನೀಡಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ರವರನ್ನು ಕೋರಲಾಗಿತ್ತು. ಈ ಪ್ರಕಾರ ರಾಮನಗರ ಜಿಲ್ಲೆಯಲ್ಲಿ ನಾನ್ ಫಾರೆಸ್ಟ್ ಭೂಮಿ ಲಭ್ಯವಿಲ್ಲದಿರುವುದರಿಂದ, ವಲಯ ಅರಣ್ಯ ಅಧಿಕಾರಿ, ರಾಮನಗರ ವಲಯ ಇವರ ವರದಿಯನುಸಾರ ಹುಲ್ತಾರ್ ಗಸ್ತಿನ ಹುಲ್ತಾರ್ ಮೀಸಲು ಅರಣ್ಯ ಪ್ರದೇಶದ ಸರ್ವೆ ನಂಬರು 1ರ ಲಕ್ಕನದೊಡ್ಡಿಯಿಂದ ಕಲ್ಲುಗೋಪನಹಳ್ಳಿಗೆ ಹೋಗುವ ಮಣ್ಣಿನ ರಸ್ತೆಯ ಬಲಬಾಗದ ಆಕಾಶವಾಣಿ ತಾರ್ ಪ್ರದೇಶದಲ್ಲಿ 4.248 ಹೆಕ್ಟೇರ್ ಕ್ಷೀಣಿತ ಅರಣ್ಯ ಪ್ರದೇಶ (Degraded Forest) ವನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಗುರುತಿಸಿರುವ ಅರಣ್ಯ ಪ್ರದೇಶದ ವರದಿ ನಕ್ಷೆ ಟೋಪೋ ನಕಾಶೆ, ಗೂಗಲ್ ಮ್ಯಾಪ್ ಮತ್ತು ಗ್ರಾಮ ನಕಾಶೆಗಳನ್ನು ಉಲ್ಲೇಖ ಪತ್ರ (6) ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ವಿಭಾಗ, ರಾಮನಗರ ರವರು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಿ, ಆನ್‌ಲೈನ್ ಅರಣ್ಯ ವಿಮೋಚನಾ ಪ್ರಸ್ತಾವನೆಯ ಭಾಗ –1 ಮತ್ತು ಭಾಗ–2ನ್ನು ಈ ಕಛೇರಿಯಿಂದ ಭರ್ತಿಮಾಡಿದ್ದು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಮನಗರ ಪ್ರಾದೇಶಿಕ ವಿಭಾಗ, ರಾಮನಗರ ರವರು 4.248 ಹೆಕ್ಟೇರ್ ಕ್ಷೀಣಿತ ಅರಣ್ಯ ಪ್ರದೇಶವನ್ನು ಗುರುತಿಸಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಮುಂದಿನ ಕ್ರಮ ಕೈಗೊಳ್ಳುವ ಕುರಿತು ಈ ಕಛೇರಿಗೆ ಕಳುಹಿಸಿರುವ Site suitability Certificate, ಟೋಪೋ ನಕಾಶೆ, ಗೂಗಲ್ ಮ್ಯಾಪ್ ಮತ್ತು ಗ್ರಾಮ ನಕಾಶೆಗಳ ಐದು ಪ್ರತಿಗಳನ್ನು ಈ ಪತ್ರದ ಜೊತೆ ಲಗತ್ತಿಸಿ ಸಲ್ಲಿಸುತ್ತ, ಪ್ರಸ್ತಾವಿತ 66/11 ಕೆವಿ ಹೆಗ್ಗನೂರು ಉಪ ಕೇಂದ್ರಕ್ಕೆ ಹಾಲಿ ಇರುವ 66/11ಕೆವಿ ದೊಡ್ಡಾಲಹಳ್ಳಿ ಉಪ ಕೇಂದ್ರದಿಂದ 12.238 ಕಿ.ಮೀ. 66 ಕೆವಿ ಎಸ್.ಸಿ. ಮಾರ್ಗ ನಿರ್ಮಿಸಲು ಉದ್ದೇಶಿಸಿರುವ ಪ್ರಸ್ತಾವನೆಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ಈ ಮೂಲಕ ತಮ್ಮಲ್ಲಿ ಕೋರಿದೆ.

ತಮ್ಮ ನಂಬುಗೆಯ
ಸಹಿ/–
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕಾವೇರಿ ವನ್ಯಜೀವಿ ವಿಭಾಗ,
ಕೊಳ್ಳೇಗಾಲ.

- ಪ್ರತಿಯನ್ನು ಗೌರವಗಳೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಅರಣ್ಯ ಭವನ, ಬೆಂಗಳೂರು ರವರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
- ಪ್ರತಿಯನ್ನು ಗೌರವಗಳೊಂದಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಎಫ್‌ಸಿಎ), ಅರಣ್ಯ ಭವನ, ಬೆಂಗಳೂರು ರವರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
- ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ಉಪ ವಿಭಾಗ, ಕನಕಪುರ ರವರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
- ಪ್ರತಿಯನ್ನು ವಲಯ ಅರಣ್ಯ ಅಧಿಕಾರಿ, ವನ್ಯಜೀವಿ ವಲಯ, ಸಂಗಮ ರವರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕಾವೇರಿ ವನ್ಯಜೀವಿ ವಿಭಾಗ,
ಕೊಳ್ಳೇಗಾಲ.

ರವಾನಿಸಲಾಗಿದೆ
ದಿನಾಂಕ 27-12-2018

2/1/19

ಕರ್ನಾಟಕ ಸರ್ಕಾರ

ಸುಲ್ತಾನ್ ಷರೀಫ್ ವೃತ್ತ, ಸತ್ಯಮಂಗಲ ರಸ್ತೆ,
ಚಾಮರಾಜನಗರ – 571 313
ದೂರವಾಣಿ : ಕಚೇರಿ: 08226-226229
ಈ ಮೈಲ್ : chncirccf@gmail.com

ಅರಣ್ಯ ಇಲಾಖೆ

## ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ (ಪ್ರಾದೇಶಿಕ), ಚಾಮರಾಜನಗರ

ಸಂಖ್ಯೆ: ಸಿ7/ಲ್ಯಾಂಡ್/ರಸ್ತೆ ನಿರ್ಮಾಣ/ಹೆಗ್ಗನೂರು ಉಪ ಕೇಂದ್ರ/ಜಿಎಲ್-1905/2018-19 ದಿನಾಂಕ: 24-01-2019.

ಇವರಿಗೆ,

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,**
(ಅರಣ್ಯ ಸಂರಕ್ಷಣೆ), ಅರಣ್ಯ ಭವನ,
ಮಲ್ಲೇಶ್ವರಂ, **ಬೆಂಗಳೂರು.**

ಮಾನ್ಯರೇ,

ವಿಷಯ : Diversion of 2.124 (Revised from 1.494 ha.) of forest land in Sy. No.1 of Cheelandavadi Village, Kanakapura Taluk in Ramanagara Division & District for construction of 66 KV Sc line on DC towers from existing 66/11 KV Doddalahalli Sub-station to Proposed 66/11 KV Hegganuru Substation (12.238 Kms distance) in favour of the Executive Engineer (Ele.) Major works division, Karnataka power Transmission Corporation Limited (KPTCL), Old BM Road, Ramanagar **Proposal No: FP/KA/TRANS/27085/2017.**

ಉಲ್ಲೇಖ :
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: ಎ5(4)(6)/ಜಿಎಫ್ಎಲ್/ಸಿಆರ್-7/2017-18 ದಿನಾಂಕ: 12.02.2018.
2. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಪತ್ರ ಸಂಖ್ಯೆ: ಎ4/ಲ್ಯಾಂಡ್/ಎಫ್‌ಸಿ/ವಿವ-8/2017-18 ದಿನಾಂಕ: 26.12.2018.

ಸಾಂಖ್ಯಾದೀಶಾನಾಗ

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಹೆಗ್ಗನೂರು ಬಳಿ ಸ್ಥಾಪಿಸಲಾಗುವ 66/11 ಕೆವಿ ಉಪ ವಿದ್ಯುತ್ ಕೇಂದ್ರಕ್ಕೆ ಹಾಲಿ ಇರುವ 66/11 ಕೆವಿ ದೊಡ್ಡಾಲಹಳ್ಳಿ ಉಪ ಕೇಂದ್ರದಿಂದ 12.238 ಕಿ.ಮೀ. 66 ಕೆವಿ ಎಸ್.ಸಿ ಮಾರ್ಗ ನಿರ್ಮಿಸಲು ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು ಚಿಲಂದವಾಡಿ ಗ್ರಾಮದ ಸರ್ವೆ ನಂ.1ರ ಅರಣ್ಯ ಪ್ರದೇಶ 2.124 ಹೆ. ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಿಡುಗಡೆ ಮಾಡುವ ಬಗ್ಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು ರವರು ಕೋರಿರುವ ಮೇರೆಗೆ, ಮೇಲಾಧಿಕಾರಿಗಳ ನಿರ್ದೇಶನದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರು ಸದರಿ ಉದ್ದೇಶಕ್ಕೆ ಬಿಡುಗಡೆ ಮಾಡಲು ಕೋರಿರುವ ಸ್ಥಳವನ್ನು ಪರಿಶೀಲಿಸಿ ಉಲ್ಲೇಖ (2)ರಂತೆ ಈ ಕಛೇರಿಗೆ ವರದಿ ಮಾಡಿರುತ್ತಾರೆ ಹಾಗೂ ಉಪಯೋಗಿ ಸಂಸ್ಥೆಯವರು ಮೇಲಿನ ಅರಣ್ಯ ಭೂಮಿಗೆ ಬದಲಾಗಿ ಪರಿಹಾರಾತ್ಮಕ ನೆಡುತೋಪು ನಿರ್ಮಾಣಕ್ಕೆ ಎರಡು ಪಟ್ಟು ಭೂಮಿಯನ್ನು ಅಂದರೆ 4.248 ಹೆ. ರಾಮನಗರ ವಿಭಾಗ ವ್ಯಾಪ್ತಿಯಲ್ಲಿ ಡಿ ಗ್ರೇಡ್ ಮತ್ತು ನಾನ್ ಫಾರೆಸ್ಟ್ ಭೂಮಿಯನ್ನು ಗುರುತಿಸಿ, ಸದರಿ ಸ್ಥಳದ ನಕಾಶೆಯೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ ಇವರು ಸಲ್ಲಿಸಿರುವುದನ್ನು ಉಲ್ಲೇಖ (2)ರ ಪತ್ರದೊಂದಿಗೆ ಸಲ್ಲಿಸಿರುತ್ತಾರೆ ಹಾಗೂ ಈ ಸಂಬಂಧ ಆನ್‌ಲೈನ್ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮಕೈಗೊಳ್ಳಲಾಗಿರುವುದಾಗಿ ಸದರಿ ಪತ್ರದಲ್ಲಿ ತಿಳಿಸಿರುತ್ತಾರೆ.

ಉಲ್ಲೇಖ (2)ರ ಪತ್ರದೊಂದಿಗೆ ಸ್ವೀಕೃತವಾದ ಪೂರ್ಣ ದಾಖಲೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಗೌರವಗಳೊಂದಿಗೆ.

29/01/19
1518 2-2-19

ತಮ್ಮ ನಂಬುಗೆಯ,
ಸಹಿ/-
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಪ್ರಾದೇಶಿಕ), ಚಾಮರಾಜನಗರ.

A4

[[A-4Vipro] C1 Kan.Let 18-19

- ಪ್ರತಿಯನ್ನು ಗೌರವಗಳೊಂದಿಗೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
- ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

**ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,**
**(ಪ್ರಾದೇಶಿಕ), ಚಾಮರಾಜನಗರ.**